**ಕನ್ನಡ ವಿವೇಕ**

# ಇಂದಿಗೂ ಉಳಿದ ಗಾನರಾಣಿಯರ ಪ್ರಶ್ನೆ



**ಹಾಡನೊಲಿದು ಆಲಿಸಿದ ಕಿವಿಗೆ ಹೊಲೆಯಿಲ್ಲ,**
**ಮಾತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ,**
**ರೂಪನೆಟ್ ನೋಡಿದ ವಿಲೋಚನಕೆ ಹೊಲೆಯಿಲ್ಲ,**
**ಮೆಯ್ ಮುಡಿಗಳಿಂ ಸುಳಿವ ತಂಗಾಳಿಯಿಂ ತೀಡುವ**
**ಸುಗಂಧಮಂ ವಾಸಿಸಿದ ನಾಸಿಕಕೆ ನಾಡೆ ಹೊಲೆಯಿಲ್ಲ,**
**ಸೋಂಕಿಂಗೆ ಹೊಲೆಯುಂಟಾಯ್ತೆ? ಕೂಡಿರ್ದ**
**ಪಂಚೇಂದ್ರಿಯಂಗಳೊಳು ನಾಲ್ಕಧಮ ಒಂದಧಿಕವೇ?**
**-ರಾಘವಾಂಕ**

ಹರಿಶ್ಚಂದ್ರ ಮತ್ತು ಹೊಲತಿಯರ ಸಂವಾದದ ಮೂಲಕ ಸಮಾಜದಲ್ಲಿ ಹೆಪ್ಪುಗಟ್ಟಿರುವ ಜಾತೀಯತೆಯನ್ನು ತೀವ್ರ ವಿಮರ್ಶೆಗೆ ಒಳಪಡಿಸುವ ಪ್ರಸಂಗ ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದ ರಸಘಟ್ಟಗಳಲ್ಲೊಂದು. ಧರ್ಮ ಮತ್ತು ಸತ್ಯ ಪರಿಪಾಲನೆ ಪ್ರಾಣಕ್ಕೂ ಮಿಗಿಲೆಂದು ತಿಳಿದ ಭೂಪಾಲನಿಗೂ ಮನಸ್ಸಿನ ಮಾಲಿನ್ಯದಿಂದ ಮುಕ್ತಗೊಳ್ಳುವುದು ಸಾಧ್ಯವಾಗಿಲ್ಲ. 'ನೀವು ಹೊಲತಿಯರೆಂದ ಮೇಲೆ ನಿಮಗಿರುವ ಚೆಲುವು, ಯೌವನ, ಜಾಣ್ಮೆಗಳೆಲ್ಲ ವ್ಯರ್ಥ' ಎನ್ನುವ ಹರಿಶ್ಚಂದ್ರನ ಕುಹಕಕ್ಕೆ, ಗಾನರಾಣಿಯರು ನೀಡುವ ಪ್ರತಿಕ್ರಿಯೆ, ಕಾವ್ಯಸಂದರ್ಭವನ್ನೂ ಮೀರಿ ಅಸ್ಪೃಶ್ಯತೆಯನ್ನು ಆಚರಿಸುವ ಮನಸ್ಸುಗಳನ್ನು ನೇರವಾಗಿ ಪ್ರಶ್ನಿಸುತ್ತದೆ. ಕೇಳುವ ಕಿವಿ, ನೋಡುವ ಕಣ್ಣು, ಮಾತನಾಡುವ ಬಾಯಿ, ವಾಸನೆ ಗ್ರಹಿಸುವ ಮೂಗು – ಇವುಗಳಿಗಿಲ್ಲದ 'ಹೊಲೆ' ಚರ್ಮಕ್ಕೆ ಮಾತ್ರವಿದೆಯೆ? ನೋಟ, ರುಚಿ, ವಾಸನೆ, ಮಾತುಗಳಿಗಿಲ್ಲದ ತೊಡಕು ಸ್ಪರ್ಶಕ್ಕೆ ಮಾತ್ರವಿದೆಯೆ? ಹಾಗಾದರೆ, ಪಂಚೇಂದ್ರಿಯಗಳಲ್ಲಿ ನಾಲ್ಕು ಉತ್ತಮ, ಮತ್ತೊಂದು ಕೀಳೆ ಎಂದು ಗಾನರಾಣಿಯರು ಪ್ರಶ್ನಿಸುತ್ತಾರೆ. ಅವರ ಪ್ರಶ್ನೆ, ರಾಘವಾಂಕನ ಕಾಲಕ್ಕೆ ಮಾತ್ರವಲ್ಲ, ಇಂದಿಗೂ ಉತ್ತರಿಸಲಾಗದ ಪ್ರಶ್ನೆಯೇ ಆಗಿದೆ. ಕಾವ್ಯಸಂದರ್ಭದ ಸಾಂಗತ್ಯದ ಮಾತಿರಲಿ, ಮನುಷ್ಯ ಮನುಷ್ಯರ ನಡುವೆ ಸಾಧ್ಯವಾಗಬೇಕಾದ ಪ್ರೇಮದ ಸ್ಪರ್ಶಕ್ಕೂ ಹಿಂಜರಿಯುವ ಜನ ನಮ್ಮ ನಡುವೆಯೇ ಇದ್ದಾರೆ. ನಾಗರಿಕರಾದಷ್ಟೂ ನಮ್ಮ ಸಂವೇದನೆಗಳು ಹೆಚ್ಚು ಹೆಚ್ಚು ಜಡಗಟ್ಟುತ್ತಿರುವ ಉದಾಹರಣೆಗಳು ವಿಶ್ವದ ಎಲ್ಲ ಭಾಗಗಳಲ್ಲೂ ಕಣ್ಣಿಗೆ ರಾಚುವಂತಿವೆ. ಮಂದಹಾಸ, ಪ್ರೇಮದ ಮಾತು, ಆರ್ದ್ರ ಸ್ಪರ್ಶಗಳಿಲ್ಲದೆ ನಾವು ಮಾನವೀಯ ಜಗತ್ತು ರೂಪಿಸುವುದು ಸಾಧ್ಯವೆ?

**-ಮಹತಿ**

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68